# ಹೃದಯದ ಹದ

ರಾಮಾಯಣದ ಉದ್ದಕ್ಕೆ ಕ್ರೌಂಚದ ಅಳಲು ನಾನಾರೀತಿಗಳಲ್ಲಿ ಕೇಳಿಸುತ್ತದೆಯಾದರೂ ಅಯೋಧ್ಯಾಕಾಂಡದಲ್ಲಿ ಆ ಅಳಲು, ಆ ನೋವು ಮಡುಗಟ್ಟಿದೆ. ನೋವು ಎಂದರೆ ಅಗಲಿಕೆ. ಅಗಲಿಕೆ ಎಂದರೆ ನೋವು. ತಂದೆ- ತಾಯಿಗಳಿಗೆ ಮಕ್ಕಳಿಂದ ಅಗಲಿಕೆ. ದಶರಥ, ಕೌಸಲ್ಯೆ, ಸುಮಿತ್ರೆಯರಿಗೆ ರಾಮ ಸೀತೆ ಲಕ್ಷ್ಮಣರಿಂದ. ಅದೂ, ಮುಪ್ಪಿನಲ್ಲಿ. ಅದೂ, ಈ ಅಗಲಿಕೆಗೆ ತಂದೆ ತಾಯಿಯರೇ–ದಶರಥ ಕೈಕೆಯರೇ–ಕಾರಣವಾಗಿ. ಅದೂ ಪಟ್ಟಾಭಿಷೇಕ ನಡೆಯಬೇಕಾದ ಹೊತ್ತಿನಲ್ಲಿ. ಅದೂ ತುಸು ಅವಸರವಸರವಾಗಿ ಈ ಪುಷ್ಯಯೋಗದ ಪಟ್ಟಾಭಿಷೇಕವನ್ನು ದಶರಥನೇ ನಿರ್ಣಯಿಸಿರಲಾಗಿ. ಅದೂ, ಅವಸರಕ್ಕೆ ಕಾರಣವೇನೆಂದರೆ ತನ್ನ ಬದುಕಿನ ಬಗ್ಗೆ ದಶರಥನಿಗೇ ಭರವಸೆ ಇಲ್ಲದೆ, ಸಾವನ್ನು ಸೂಚಿಸುವ ದುಃಸ್ವಪ್ನಗಳು ತನ್ನನ್ನು ಕಾಡುತ್ತಿವೆ ಎಂಬುದಕ್ಕಾಗಿ! ಮತ್ತು ಆದಷ್ಟು ಶೀಘ್ರ ರಾಮನನ್ನು ಸಿಂಹಾಸನದಲ್ಲಿ ಕುಳ್ಳಿರಿಸುವ ತನ್ನ ಕರ್ತವ್ಯವನ್ನು ನೆರವೇರಿಸಿಬಿಡಬೇಕು ಎಂಬುದಕ್ಕಾಗಿ!

ದಶರಥನು ತನ್ನ ಬಗ್ಗೆಯೇ ಕಂಡ ದುಃಸ್ವಪ್ನಗಳು ಈಗ ಅಂದರೆ ರಾಮನು ಕಾಡಿಗೆ ಹೊರಡುತ್ತಿರುವ ಹೊತ್ತಿನಲ್ಲಿ ಬೇರೆಯೇ ಒಂದು ರೂಪದಲ್ಲಿ ನಿಜವಾಗುತ್ತಿವೆ! ಗದ್ದುಗೆಯಲ್ಲಿ ತಾನು ಕೈಹಿಡಿದು ಕುಳ್ಳಿರಿಸಬೇಕಾದ ತನ್ನ ಪ್ರಾಣಪ್ರಿಯನಾದ ಮಗ, ತನ್ನ ಒಂದು ಮಾತೇ ಕಾರಣವಾಗಿ, ಕಾಡಿಗೆ ನಡೆಯುವುದನ್ನು ನೋಡಿ, ದಶರಥನಿಗೆ ಬದುಕುವ ಆಸೆಯೇ ಕಳೆದುಹೋಗಿದೆ. ಇದು ಸ್ವಪ್ನವಲ್ಲ. ವಾಸ್ತವ. ಕಾವ್ಯವೆಂದರೆ ಕನಸು ಮತ್ತು ವಾಸ್ತವಗಳ ಅನೂಹ್ಯವಾದ ಒಂದು ಹೆಣಿಗೆ ಎಂದು ವಾಲ್ಮೀಕಿ ಸೂಚಿಸುವಂತಿದೆ!

ರಾಮನಿಗೂ ಇದು ದುಃಖದಾಯಕ. ಇದೊಂದೇ ದುಃಖದಾಯಕ. ತನ್ನ ವನಗಮನವು ದುಃಖವಲ್ಲ. ಅದು ಕರ್ತವ್ಯ. ಏಕೆಂದರೆ ಅದು ತಾಯಿಯ ಮಾತು! ಪರೋಕ್ಷವಾಗಿ ತಂದೆಯ ಮಾತು! ಕೌಸಲ್ಯೆ, ಸುಮಿತ್ರೆಯರನ್ನು ಅಗಲಿ ಹೋಗುವುದೂ ದುಃಖವಲ್ಲ. ಈ ತಾಯಂದಿರಿಬ್ಬರೂ ದಶರಥನ ಬಳಿಯೇ ಇರಬೇಕಾದವರು. ಸೀತೆ ಒಡನಾಡಿಯಾಗಿ ಬರುತ್ತಿರುವುದೂ ದುಃಖವಲ್ಲ– ಸಂತೋಷವೇ. ಲಕ್ಷ್ಮಣ ಜತೆಯಲ್ಲಿರುತ್ತೇನೆಂದು ಹಠಮಾಡಿದರೆ ಬೇಡವೆನ್ನುವಂತಿಲ್ಲ. ಅಲ್ಲದೆ ರಾಮನ ವನಗಮನದ ಕುರಿತು ಕುಪಿತನೇ ಆಗಿರುವ ಲಕ್ಷ್ಮಣನನ್ನು ಅಯೋಧ್ಯೆಯಲ್ಲಿ ಬಿಟ್ಟು ಹೋಗುವುದೂ ಒಂದು ರೀತಿಯಲ್ಲಿ ಅಪಾಯವೇ. ಊರ್ಮಿಳೆಯ ಕುರಿತು ತಮ್ಮ ದುಃಖವನ್ನು ರಾಮ; ಸೀತೆ ತಾವೇ ನುಂಗಿಕೊಂಡರೆಂದೇ ಹೇಳಬೇಕು! ದುಃಖವೆಂದರೆ, ತನ್ನ ಬದುಕಿನ ಬಗೆಗೆ ಭರವಸೆ ಇಲ್ಲ ಎನ್ನುತ್ತಲೇ ಇದ್ದ ದಶರಥನನ್ನು, ಆ ಮಾತು ನಿಜವಾಗಲಿದೆ ಎಂದು ಯಾರಿಗೂ ಅನ್ನಿಸಬಹುದಾದ ಈ ಆಯತಸಮಯದಲ್ಲಿ ಅಗಲಲೇಬೇಕಾಗಿ ಬಂದ ಸಂದರ್ಭ!

ವಾಲ್ಮೀಕಿ; ನಾರದನಲ್ಲಿ ಕೇಳಿದ ಮೊದಲ ಪ್ರಶ್ನೆಯಲ್ಲಿಯೇ ಯಾರು ಈ ಕಾಲದಲ್ಲಿ ಸತ್ಯವಂತ? ಸತ್ಯವಾಕ್ಯೋಃ? –ಎಂದು ಕೇಳಿದ್ದಾನೆ. ಸತ್ಯವಾಕ್ಯಃ ಎಂಬ ಪದಕ್ಕೆ ಸತ್ಯವನ್ನು ನುಡಿಯುವವನು, ಸತ್ಯವನ್ನು ಆಳವಾಗಿ ಗ್ರಹಿಸಬಲ್ಲವನು ಎಂದು ಮಾತ್ರವಲ್ಲ, ಕಾವ್ಯದ ಒಳಗಿನಿಂದ ನೋಡಿದರೆ, ಇನ್ನೊಬ್ಬನನ್ನು ಸತ್ಯನಿಷ್ಠನನ್ನಾಗಿಸುವುದು ತನ್ನ ಅಳವಿನಲ್ಲಿದ್ದು ತನಗೆ ಸಂಬಂಧಿಸಿದುದಾಗಿದ್ದರೆ, ಅದಕ್ಕಾಗಿ ತಾನು ಎಂಥ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ ಹಿಂಜರಿಯದೆ, ಅದನ್ನು ಸಾಧಿಸುವವನು ಎಂದು ಅರ್ಥವಾಗುತ್ತದೆ. ಈ ಸಾಧನೆಯಲ್ಲಡಗಿರುವ ವಿಕಟತೆ ಏನೆಂದರೆ ಯಾರನ್ನು ಸತ್ಯನಿಷ್ಠನನ್ನಾಗಿಸಲು ತಾನು ಕಾಡಿಗೆ ಹೋಗಲೂ ಸಿದ್ಧನಾಗಿರುವನೋ ಆ ದಶರಥನಿಗೇ ಈ ಉಪಕ್ರಮ ತೀರಾ ಅಪ್ರಿಯವಾಗಿರುವುದು. ಅಸಹನೀಯ ದುಃಖದಾಯಕವಾಗಿರುವುದು. ಜೀವನ್ಮರಣ ಸಂದಿಗ್ಧವನ್ನು ಉಂಟುಮಾಡುವಂಥದಾಗಿರುವುದು. ಈ ವಿಕಟತೆಯನ್ನು ಅರ್ಥಮಾಡಿಕೊಳ್ಳಲಾಗುವುದು ಹೃದಯಕ್ಕೆ ಮಾತ್ರ ತಿಳಿಯಬಲ್ಲ ಒಂದು ಹದದಿಂದ! ಆದರೆ ಇಂಥ ಸಂದರ್ಭಗಳ ಚಿತ್ರಣವಿಲ್ಲದೇ ಇರುತ್ತಿದ್ದರೆ ಸತ್ಯವಾಕ್ಯಃ ಎನ್ನುವ ಮಾತು ಹುಸಿಯಾಗಿ ಬಿಡುತ್ತಿತ್ತು. ಕಾವ್ಯದಲ್ಲಿ ಮಾತು ಹುಸಿಯಾಗದೆ ಇರುವುದಕ್ಕೂ ಇಂಥ ಅಗ್ನಿದಿವ್ಯದ ಸಂದರ್ಭಗಳಿಗೂ ಹತ್ತಿರದ ನಂಟಿದೆ.

ಹಕ್ಕಿಯ ಅಳಲಿಗೂ ವಾಲ್ಮೀಕಿಯ ವಾಕ್ಯಕ್ಕೂ ಇರುವ ನಂಟಿನ ಹಾಗೆ.

ದಶರಥ ಭೂಪತಿಯ ದುಃಖ ಭೂಮಿಯಷ್ಟು ದೊಡ್ಡದು. ತನ್ನ ಜೀವದ ಬಲಿಯನ್ನು ತೆರದೆ ಆ ದುಃಖ ನೀಗದು! ಪುತ್ರಕಾಮೇಷ್ಟಿ ಮಾಡಿ ದೇವತೆಗಳನ್ನು ಒಲಿಸಿ ಪಡೆದ ಮಕ್ಕಳು. ಅಂದರೆ ದೈವಕೃಪೆ! ಈ ದೈವಕೃಪೆಯನ್ನು ಅನುಭವಿಸುವುದು ಮಾತ್ರ ಜೀವನ್ಮರಣ ಸಂಗತಿಯಾಗಿಬಿಟ್ಟಿತು! ಪಟ್ಟಕ್ಕೆ ನಿಯುಕ್ತನಾದ ಮಗ ಅದೇ ಮುಹೂರ್ತದಲ್ಲಿ ಕಾಡಿಗೆನಡೆಯಬೇಕೆಂದಾಗ, ವನಗಮನದ ಆ ನಿಯೋಗವನ್ನು ನಿರ್ವಿಕಾರವಾಗಿ ಒಪ್ಪಿದನಲ್ಲ– ಆಗ 'ದೈವಕೃಪೆ'ಎಂದರೇನು ಎನ್ನುವುದರ ಅರ್ಥ ದಶರಥನಿಗೆ ಹೊಳೆಯಬಹುದಿತ್ತು!

ಹೃದಯದ ಒಂದು ಹದದಿಂದ ಮಾತ್ರ ಹೊಳೆಯಬಹುದಾದುದು ಈ ಅರ್ಥ! ದೈವಕೃಪೆ ಪಡೆದವನನ್ನು ಅರಮನೆಯಲ್ಲಿ ಉಳಿಸಿಕೊಳ್ಳುವುದು ಕಷ್ಟ!

ಮಕ್ಕಳಿಲ್ಲ. ಉತ್ತರಾಧಿಕಾರಿಗಳಿಲ್ಲ; ಆದುದರಿಂದ ಮಕ್ಕಳನ್ನು ಪಡೆಯಬೇಕೆಂಬ ಸಹಜ ಕೌಟುಂಬಿಕ ನಿರೀಕ್ಷೆಯೊಂದನ್ನು ಸಂಸ್ಕೃತಿಯ ದೃಷ್ಟಿಯಿಂದ ನೋಡಿದರೆ, ಅಪಮೌಲ್ಯಗೊಳ್ಳುತ್ತಿರುವ ನಾಗರಿಕತೆಯು, ಹುಟ್ಟಲಿರುವ ಈ ಮಗುವಿನಿಂದ ಉದ್ಧಾರವಾದೀತೇನೋ ಎಂಬ ಊರ್ಧ್ವಗಾಮೀನಿರೀಕ್ಷೆಯಾಗಿರುತ್ತದೆ. ಎಲ್ಲ ಮಕ್ಕಳ ಹುಟ್ಟಿನಲ್ಲಿಯೂ ಸಂಸ್ಕೃತಿಗೆ ಇಂಥದೊಂದು ನಿರೀಕ್ಷೆ ಇರುತ್ತದೆ ಎಂದರೆ ತಪ್ಪಲ್ಲ. ನಾರದನಲ್ಲಿ ವಾಲ್ಮೀಕಿ ಕೇಳಿದ ಪ್ರಶ್ನೆ– ಈ ಕಾಲದಲ್ಲಿ ಯಾರು ಗುಣವಾನ್? ಎಂಬ ಪ್ರಶ್ನೆ– ಈ ಸಾಂಸ್ಕೃತಿಕ ನಿರೀಕ್ಷೆಯ ಇನ್ನೊಂದು ಮುಖವೇ ಆಗಿದೆ. ರಾಮಾಯಣದ ಉದ್ದಕ್ಕೆ ಈ ನಿರೀಕ್ಷೆ ಬೆಳೆಯುತ್ತ ಹೋಗಿರುವುದು ಕಾಣುತ್ತದೆ,

■ ತೋಷ

## ಮಾತೇ ಮುತ್ತು

★ ಸಿಟ್ಟಿಗೆ ಅತ್ಯುತ್ತಮ ಔಷಧಿಯೆಂದರೆ ಮೌನ.

–ಖಲೀಫಾ ಉಸ್ಮಾನ್

★ ಉದ್ದೇಶ ಮತ್ತು ಗುರಿ ಇಲ್ಲದಿದ್ದಲ್ಲಿ, ಪ್ರಯತ್ನ ಮತ್ತು ಧೈರ್ಯ ಸಾಕಾಗುವುದಿಲ್ಲ.

–ಜಾನ್ ಎಫ್ ಕೆನಡಿ

★ ನೀವು ಜೀವಂತ ಇರುವಾಗಲೇ ನಿಮ್ಮ ಕೈಯ ಕಟ್ಟುಗಳನ್ನು ಬಿಚ್ಚಿಕೊಳ್ಳದಿದ್ದರೆ, ಸತ್ತ ಬಳಿಕ ಪ್ರೇತಗಳು ಬಂದು ಅವನ್ನು ಬಿಚ್ಚುತ್ತವೆಯೆ?

–ಸಂತ ಕಬೀರ

★ ನಾಳೆಯೇ ಈ ಜಗತ್ತು ಚೂರು ಚೂರಾಗಿ ಹೋಗುವುದೆಂದು ಗೊತ್ತಾದರೂ, ನಾನು ಇವತ್ತು ಸೇಬಿನ ಗಿಡ ನೆಡುವುದನ್ನು ನಿಲ್ಲಿಸುವುದಿಲ್ಲ.

–ಮಾರ್ಟಿನ್ ಲೂಥರ್

★ ಈ ಜಗತ್ತು ಜೀವಿಸಲು ಅಪಾಯಕಾರಿ ಸ್ಥಳ. ಇಲ್ಲಿ ಕೆಡುಕುಗಳಿವೆ ಎಂದಲ್ಲ; ಆ ಕೆಡುಕುಗಳ ಬಗ್ಗೆ ಜನರು ಏನೂ ಮಾಡುವುದಿಲ್ಲ ಎಂಬ ಕಾರಣಕ್ಕಾಗಿ.

–ಆಲ್ಬರ್ಟ್ ಐನ್‌ಸ್ಟೀನ್

★ ಜನರು ನನ್ನನ್ನು ಒಬ್ಬ ಒಳ್ಳೆಯ ಶಿಕ್ಷಕ ಎಂದು ನೆನಪಿಟ್ಟುಕೊಂಡರೆ ಅದೇ ನನಗೆ ಅತಿದೊಡ್ಡ ಗೌರವ.

–ಎ.ಪಿ.ಜೆ.ಅಬ್ದುಲ್ ಕಲಾಮ್

★ ಕ್ಷಮೆ ಎನ್ನುವುದು ನಿಮಗೆ ನೀವೇ ಕೊಡಬಹುದಾದ ಅತ್ಯುತ್ತಮ ಬಹುಮಾನ. ಎಲ್ಲರನ್ನೂ ಕ್ಷಮಿಸಿ.

–ಮಾಯಾ ಏಂಜೆಲೊ

★ ವಯಸ್ಕರು ಎಲ್ಲವನ್ನೂ ನಂಬುತ್ತಾರೆ. ಮಧ್ಯವಯಸ್ಕರು ಎಲ್ಲವನ್ನೂ ಅನುಮಾನಿಸುತ್ತಾರೆ. ಯುವಕರಿಗೆ ಎಲ್ಲವೂ ಗೊತ್ತಿರುತ್ತದೆ.

–ಆಸ್ಕರ್ ವೈಲ್ಡ್

★ ಸತ್ಯದ ದಾರಿಯಲ್ಲಿ ಎರಡು ತಪ್ಪುಗಳು ಮಾತ್ರ ಸಾಧ್ಯ. ಒಂದು ದಾರಿ ಮುಗಿಯುವವರೆಗೆ ನಡೆಯದಿರುವುದು. ಇನ್ನೊಂದು ನಡಿಗೆಯನ್ನೇ ಆರಂಭಿಸದಿರುವುದು.

–ಗೌತಮ ಬುದ್ಧ

★ ಪರಸ್ಪರ ಪ್ರೀತಿಸಿ, ಆದರೆ ಪ್ರೇಮದಾಸ್ಯ ಬೇಡ. ಸಮುದ್ರದ ಎರಡೂ ದಡಗಳ ಮಧ್ಯೆ ಚಲಿಸುತ್ತಿರುವ ಅಲೆಗಳಂತೆ ನಿಮ್ಮ ಪ್ರೇಮವಿರಲಿ.

–ಖಲೀಲ್ ಗಿಬ್ರಾನ್